**ಬಾಸಾಃ 1 ಪ್ರಾಸಾಃ 1**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ**

**ಸಿಸಿ ಸಂಖ್ಯೆ: 493/2023**

| | | |
|---|---|---|
| ಹೆಸರು | : | ಅಬ್ದುಲ್ ರಜಾಕ್ |
| ತಂದೆಯ ಹೆಸರು | : | ಅಹಮ್ಮದ್ ಬ್ಯಾರಿ |
| ಪ್ರಾಯ | : | 48 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸ | : | ಮಲಬೆಟ್ಟು ಗ್ರಾಮ, ಬೆಳ್ತಂಗಡಿ ತಾಲೂಕು |

**ದಿನಾಂಕ 27.08.2024 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ

ದಿಃ 24.12.2022 ರಂದು ಬೆಳಿಗ್ಗೆ ನಾನು ಬೈಕ್ ಸಂಃ 0608 ನಲ್ಲಿ ಮಲಬೆಟ್ಟುವಿನಿಂದ ಬೆಳ್ತಂಗಡಿಗೆ ಬರುವಾಗ ಸುಮಾರು 8.20 ಗಂಟೆಗೆ ಒಂದು ಸ್ಕೂಲ್ ಬಸ್ಸು ನನ್ನನ್ನು ಓವರ್ ಟೇಕ್ ಮಾಡಿ ಅತಿವೇಗವಾಗಿ ಬಂದು ನನ್ನನ್ನು ಹಿಂದಿಕ್ಕಿ ಮುಂದೆ ಹೋಗಿರುತ್ತದೆ. ಸ್ವಲ್ಪ ಮುಂದೆ ಹೋದಾಗ ಬೆಳ್ತಂಗಡಿ ಕಡೆಯಿಂದ ಕೊಯ್ಯೂರು ಕಡೆಗೆ ಹೋಗುತ್ತಿದ್ದಾಗ ಒಂದು ಆಲ್ಫಾ ಗೂಡ್ಸ್ ಗಾಡಿಗೆ ಡಿಕ್ಕಿ ಹೊಡೆದಿರುತ್ತದೆ. ಆ ಸಮಯದಲ್ಲಿ ರಿಕ್ಷಾ ಪಲ್ಟಿಯಾಗಿರುತ್ತದೆ. ನಂತರ ರಿಕ್ಷಾದ ಹತ್ತಿರ ಹೋಗಿ ರಿಕ್ಷಾವನ್ನು ಎತ್ತಿ ನೋಡಲಾಗಿ ಮೂರು ಜನ ಇದ್ದರು, ಅವರಲ್ಲಿ ಹನೀಫ ಎಂಬುವವರು ಚಾಲಕರಾಗಿದ್ದು, ಅವರಿಗೆ ಪೆಟ್ಟಾಗಿತ್ತು. ಅಹಮ್ಮದ್ ಎಂಬುವವರು ಇದ್ದರು ಅವರಿಗೆ ಸಹ ಪೆಟ್ಟಾಗಿತ್ತು. ರಜಾಕ್ ಎಂಬುವವರಿಗೆ ತುಂಬಾ ಪೆಟ್ಟಾಗಿದ್ದು ಅವರು ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ರಜಾಕ್ ರವರಿಗೆ ತಲೆ, ಭುಜ ಇತರೆ ಭಾಗಗಳಿಗೆ ಪೆಟ್ಟಾಗಿತ್ತು. ನಂತರ ಅವರನ್ನು ಬೆಳ್ತಂಗಡಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇವೆ. ದಾರಿ ಮಧ್ಯೆ ಅಬ್ದುಲ್ ರಜಾಕ್ ಎಂಬುವವರು ಮರಣಹೊಂದಿರುತ್ತಾರೆ. ಉಳಿದ ಇಬ್ಬರನ್ನು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿರುತ್ತೇವೆ. ಅಪಘಾತಕ್ಕೆ

ಅತಿವೇಗ ಮತ್ತು ಅಜಾಗರೂಕತೆ ಕಾರಣವಾಗಿರುತ್ತದೆ. ಸ್ಕೂಲ್ ವಾಹನವನ್ನು ಶಶಿಧರ ಎಂಬ ಚಾಲಕ ಚಲಾಯಿಸುತ್ತಿದ್ದರು. ಅದರ ಫೋಟೋವನ್ನು ನೋಡಿದರೆ ಗುರುತಿಸಬಲ್ಲೆ. ಅದೇ ದಿನ 10.30 ಗಂಟೆಗೆ ಟ್ರಾಫಿಕ್ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಸದರಿ ದೂರಿನಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ1 ಎಂದು ಸಾಕ್ಷಿ ಸಹಿಯನ್ನು ನಿಪಿ1(ಎ) ಎಂದು ಗುರುತಿಸಲಾಯಿತು. ಅದೇ ದಿನ 2 ಗಂಟೆಗೆ ಎಸ್.ಐ ರವರು ಸ್ಥಳಕ್ಕೆ ಬಂದಿದ್ದು, 2 ಗಂಟೆಯಿಂದ 3 ಗಂಟೆಯವರೆಗೆ ಮಹಜರ್ ನ್ನು ಮಾಡಿರುತ್ತಾರೆ. ಆಗ ಪೊಲೀಸರಿಗೆ ಸ್ಥಳವನ್ನು ನಾನೇ ತೋರಿಸಿಕೊಟ್ಟಿರುತ್ತೇನೆ. ಆ ಸಮಯದಲ್ಲಿ ನನ್ನ ಜೊತೆ ಚಾಸಾ10 ಮತ್ತು 11 ರವರು ಇದ್ದರು. ಮಹಜರ್ ನಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ2 ಎಂದು ಸಾಕ್ಷಿ ಸಹಿಯನ್ನು ನಿಪಿ2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಕ್ಷೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ3 ಎಂದು ಸಾಕ್ಷಿ ಸಹಿಯನ್ನು ನಿಪಿ3(ಎ) ಎಂದು ಗುರುತಿಸಲಾಯಿತು. ಮಹಜರ್ ನಂತರ ಪೊಲೀಸರು ಬಸ್ ಮತ್ತು ರಿಕ್ಷಾವನ್ನು ಪೊಲೀಸ್ ಠಾಣೆಗೆ ತೆಗೆದುಕೊಂಡು ಬಂದಿರುತ್ತಾರೆ. ಅಲ್ಲದೆ ಆ ಸಮಯದಲ್ಲಿ ಫೋಟೋವನ್ನು ತೆಗೆದಿರುತ್ತಾರೆ. ಸದರಿ ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ4 ಮತ್ತು 5 ಎಂದು ಗುರುತಿಸಲಾಯಿತು. ತಕ್ಷೀರಿಗೆ ಸಂಬಂಧಪಟ್ಟ ಎರಡು ವಾಹನಗಳ ಫೋಟೋಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ6 ರಿಂದ 13 ಎಂದು ಗುರುತಿಸಲಾಯಿತು. ಎರಡು ಸಿ.ಡಿಗಳನ್ನು ನಿಪಿ14 ಮತ್ತು 15 ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ಈ ದಿನ ಆರೋಪಿಯ ಖುದ್ದು ವಿನಾಯಿತಿಗೆ ಅರ್ಜಿ ಸಲ್ಲಿಸಿರುವುದರಿಂದ ಆರೋಪಿಯನ್ನು ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಂ.ಬಿ.ಎಸ್ ವಕೀಲರಿಂದಃ</u>

ತಕ್ಷೀರು ಸ್ಥಳದಿಂದ ನಮ್ಮ ಮನೆ ಅರ್ಧ ಕಿ.ಮೀ ದೂರದಲ್ಲಿ ಇರುತ್ತದೆ. ಬೆಳ್ತಂಗಡಿಗೆ ಬರುವಾಗ ತಕ್ಷೀರು ಸ್ಥಳವನ್ನು ದಾಟಿ ನಮ್ಮ ಮನೆಗೆ ಹೋಗಬೇಕು. ಮಲಬೆಟ್ಟುವಿನಲ್ಲಿರುವ ಅಂಗಡಿಯಿಂದ ತಕ್ಷೀರು ಸ್ಥಳಕ್ಕೆ ಎಷ್ಟು ದೂರ ಎಂದರೆ ಸಾಕ್ಷಿ ಅರ್ಧ ಕಿ.ಮೀ ದೂರ ಎಂದು ಹೇಳುತ್ತಾರೆ. ನಮ್ಮ ಮನೆಯ ಪಕ್ಕವೇ ನಮ್ಮ ಅಂಗಡಿ ಇರುತ್ತದೆ. ಮನೆಯಿಂದ ಬರುವಾಗ ಎಷ್ಟು ದೂರದಲ್ಲಿ ಬೈಕು ನಿಮ್ಮನ್ನು ಓವರ್ ಟೇಕ್ ಮಾಡಿದೆ ಎಂದರೆ ಸಾಕ್ಷಿ ನಮ್ಮ ಮನೆಯಿಂದ ಬೆಳ್ತಂಗಡಿಗೆ ಬರುವಾಗ ಸುಮಾರು 300

ಮೀಟರ್ ದೂರದಲ್ಲಿ ಬಸ್ಸು ನನ್ನನ್ನು ಓವರ್ ಟೇಕ್ ಮಾಡಿದೆ ಎಂದು ಹೇಳುತ್ತಾರೆ. ಬಸ್ಸು ಎದುರು ಇದ್ದ ಕಾರಣ ಬಸ್ಸಿನ ಮುಂಭಾಗದಲ್ಲಿ ಏನಿದೆ ಎಂಬುದು ಕಾಣುತ್ತಿರಲಿಲ್ಲ ಎಂದರೆ ಸರಿ. ಗೂಡ್ಸ್ ಟೆಂಪೋದಲ್ಲಿ ಎಷ್ಟು ಸೀಟುಗಳು ಇದ್ದವು ಎಂದರೆ ಸಾಕ್ಷಿ ಒಂದೇ ಸೀಟು ಇತ್ತು ಎಂದು ಹೇಳುತ್ತಾರೆ. ಆ ಗೂಡ್ಸ್ ಟೆಂಪೋಗೆ ಹ್ಯಾಂಡಲ್ ಇತ್ತು. ಅದನ್ನು ಹನೀಫ್ ಎಂಬುವವರು ಚಲಾಯಿಸುತ್ತಿದ್ದರು. ಯಾರು ಯಾರೊಟ್ಟಿಗೆ ಕುಳಿತ್ತಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ, ಬಿದ್ದ ಮೇಲೆ ನಾವು ಅವರನ್ನು ನೋಡಿರುತ್ತೇವೆ.

2. ತಕ್ಷೀರು ಸ್ಥಳದಲ್ಲಿ ನೀವು ಹೋಗುವಾಗ ಯಾರೆಲ್ಲಾ ಇದ್ದರು ಎಂದರೆ ಸಾಕ್ಷಿ ಜಾಕಿರ್, ರಮ್ಲಾ, ನಾನು ಮತ್ತು ಸುಮಾರು 10 ರಿಂದ 12 ಜನ ಪ್ರಥಮವಾಗಿ ನಾನು ನೋಡುವಾಗ ಇದ್ದರು. ತಕ್ಷೀರು ಸ್ಥಳದಲ್ಲಿ ಆಂಬ್ಯುಲೆನ್ಸ್ ಬರುವವರೆಗೂ ಇದ್ದೆ. ಆಂಬ್ಯುಲೆನ್ಸ್ ಬರುವಾಗ 15 ನಿಮಿಷವಾಗಿತ್ತು. ನಾನು ಸಹ ಆಂಬ್ಯುಲೆನ್ಸ್ ನಲ್ಲಿ ಗಾಯಾಳುಗಳ ಜೊತೆ ಹೋಗಿರುತ್ತೇನೆ. ನನ್ನ ಜೊತೆ ಯಾರೋ ಒಬ್ಬರು ಇದ್ದರು ಅವರು ಯಾರು ಎಂದು ಗೊತ್ತಿಲ್ಲ. ಆಂಬ್ಯುಲೆನ್ಸ್ ನಲ್ಲಿ ಸುಮಾರು ಬೆಳಿಗ್ಗೆ 9 ಗಂಟೆ ಸಮಯಕ್ಕೆ ನಾವು ಆಸ್ಪತ್ರೆಗೆ ಬಂದಿರುತ್ತೇವೆ. ಆಸ್ಪತ್ರೆಯಿಂದ 10.30 ಗಂಟೆಗೆ ಹೊರಟು ನಾನು ಟ್ರಾಫಿಕ್ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ಪೊಲೀಸ್ ಠಾಣೆಗೆ ನಾನು ಮತ್ತು ಹನೀಫ್ ರವರ ಸಂಬಂಧಿಕರು ಹೋಗಿರುತ್ತೇವೆ. ದೂರನ್ನು ಪೊಲೀಸರು ನಾನು ಹೇಳಿದಂತೆ ಬರೆದಿರುತ್ತಾರೆ. ದೂರು ಬರೆಯುವಾಗ ಅರ್ಧ ಗಂಟೆಯಾಗಿತ್ತು. ಆಗ ಸಮಯ ಸುಮಾರು 11.30 ಗಂಟೆಯಾಗಿತ್ತು. ದೂರು ಕೊಟ್ಟ ನಂತರ ಮನೆಗೆ ಹೋಗಿರುತ್ತೇನೆ, ನಂತರ 1.45 ಗಂಟೆಗೆ ಕರೆ ಮಾಡಿ 2 ಗಂಟೆಗೆ ಸ್ಥಳಕ್ಕೆ ಬರುವಂತೆ ಹೇಳಿದ್ದರು. ನಾನು 2 ಗಂಟೆಗೆ ಸ್ಥಳಕ್ಕೆ ಬಂದಿರುತ್ತೇನೆ.

3. ಪ್ರಥಮವಾಗಿ ನೋಡುವಾಗ ಗೂಡ್ಸ್ ಗಾಡಿ ಮಾರ್ಗದ ಎಡಬದಿ ಕಚ್ಚಾ ರಸ್ತೆಯಲ್ಲಿ ಬಿದ್ದಿತ್ತು. ಬಸ್ಸು ಸ್ವಲ್ಪ ಮುಂದೆ ಹೋಗಿ ನಿಂತ್ತಿತ್ತು. ತಕ್ಷೀರು ಸ್ಥಳದಿಂದ ಬಸ್ಸು ಎಷ್ಟು ದೂರದಲ್ಲಿ ಯಾವ ಬದಿಯಲ್ಲಿ ನಿಂತಿತ್ತು ಎಂದರೆ ಸಾಕ್ಷಿ 10 ಮೀಟರ್ ದೂರದಲ್ಲಿ ಬಲಬದಿಯಲ್ಲಿ ನಿಂತಿತ್ತು ಎಂದು ಹೇಳುತ್ತಾರೆ. ಬಸ್ಸು ಬೆಳ್ತಂಗಡಿ ಕಡೆಗೆ ಮುಖಮಾಡಿ ನಿಂತಿತ್ತು. ಆಟೋ ರಿಕ್ಷಾ ಕೊಯ್ಯೂರು ಕಡೆಗೆ ಮುಖಮಾಡಿ ನಿಂತ್ತಿತ್ತು. ಗೂಡ್ಸ್ ಗಾಡಿಯನ್ನು ನಾವು ಹಾಗೆ ಎತ್ತಿ ನಿಲ್ಲಿಸಿರುತ್ತೇವೆ ಅದರ ಮುಖವನ್ನು ತಿರುಗಿಸಿರುವುದಿಲ್ಲ. ಘಟನೆಯಾದ ಸ್ಥಳದಿಂದ ಆಟೋ ರಿಕ್ಷಾ ಎಷ್ಟು ದೂರದಲ್ಲಿ ನಿಂತ್ತಿತ್ತು ಎಂದರೆ ಸಾಕ್ಷಿ ಘಟನಾ ಸ್ಥಳದಲ್ಲಿಯೇ ಆಟೋ ರಿಕ್ಷಾ ನಿಂತಿತ್ತು ಎಂದು ಹೇಳುತ್ತಾರೆ. ಘಟನಾ ಸ್ಥಳ ಸ್ವಲ್ಪ ತಿರುವು

ರಸ್ತೆಯಿಂದ ಕೂಡಿರುತ್ತದೆ. ಬೆಳ್ತಂಗಡಿಯಿಂದ ಕೊಯ್ಯೂರಿಗೆ ಹೋಗುವಾಗ ಎಡಬದಿಗೆ ತಿರುವು ಇರುತ್ತದೆ. ತಕ್ಷೀರು ಸ್ಥಳದಲ್ಲಿ ರಸ್ತೆ 18 ಅಡಿ ಇದ್ದು, ಕಚ್ಚಾ ರಸ್ತೆ ಸುಮಾರು 7 ಅಡಿ ಇರುತ್ತದೆ. ದೂರು ಕೊಡುವವರೆಗೂ ನಾನು ಸ್ಥಳಕ್ಕೆ ಹೋಗಿರುವುದಿಲ್ಲ ಆದಕಾರಣ ಪೊಲೀಸರು ಬಂದಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ 2 ಗಂಟೆಗೆ ಮಹಜರ್ ಗಾಗಿ ಬಂದಿರುತ್ತಾರೆ. ಎಸ್.ಐ ಮತ್ತು 2 – 3 ಜನ ಪೊಲೀಸರು ಇದ್ದರು. ಪೊಲೀಸರು ಸ್ಥಳವನ್ನು ಟೇಪ್ ನಲ್ಲಿ ಅಳತೆ ಮಾಡಿರುತ್ತಾರೆ. ಟೇಪನ್ನು ಎಲ್ಲಿಂದ ತಂದಿರುತ್ತಾರೆ ಎಂದು ಗೊತ್ತಿಲ್ಲ. ಅಳತೆ ಮಾಡಿದ್ದಲ್ಲದೇ ಬೇರೆ ಏನಾದರೂ ಮಾಡಿದ್ದಾರಾ ಎಂದರೆ ಸಾಕ್ಷಿ ಅಳತೆ ಮಾಡಿ ಫೋಟೋವನ್ನು ತೆಗೆದು ನನ್ನ ಸಹಿ ಪಡೆದುಕೊಂಡಿರುತ್ತಾರೆ ಮತ್ತು ವಾಹನಗಳನ್ನು ತೆಗೆದುಕೊಂಡು ಹೋಗಿರುತ್ತಾರೆ ಎಂದು ಹೇಳುತ್ತಾರೆ. ನನ್ನ ಸಹಿ ಪಡೆದುಕೊಂಡ ದಾಖಲೆಯಲ್ಲಿ ಏನು ಬರೆದಿದ್ದಾರೆ ಎಂದು ಗೊತ್ತಿಲ್ಲ. ಸ್ಥಳದಲ್ಲಿಯೇ ಮಹಜರ್ ಮಾಡಿ ಬರೆದಿದ್ದರು ಅಲ್ಲಿ ನಾನು ಸಹಿ ಮಾಡಿದ್ದೇನೆ.

4. ನಿಪಿ1 ಮತ್ತು 2, 3 ರಲ್ಲಿರುವ ನನ್ನ ಸಹಿಗಳಿಗೆ ವ್ಯತ್ಯಾಸ ಇದೆ ಎಂದರೆ ಸಾಕ್ಷಿ ವ್ಯತ್ಯಾಸ ನನಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ನಿಪಿ2 ರಲ್ಲಿರುವ ಸಹಿ ನನ್ನದಲ್ಲ ಎಂದರೆ ಸರಿಯಲ್ಲ. ಬಸ್ಸಿನಲ್ಲಿ ಎಷ್ಟು ಜನ ಬರುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಆರೋಪಿ ನನಗೆ ನೋಡಿ ಪರಿಚಯ. ತಕ್ಷೀರು ಸ್ಥಳಕ್ಕೆ ಪೊಲೀಸರು ಬಂದಾಗ ನಾನು, ಚಾಸಾ10 ಮತ್ತು 11 ರವರು ಇದ್ದು, ಅಲ್ಲದೆ 10 ರಿಂದ 12 ಜನ ಇದ್ದರು. ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ಮಹಜರ್ ನ್ನು ಪೊಲೀಸ್ ಠಾಣೆಯಲ್ಲಿ ಕೂತು ತಯಾರಿಸಿದ್ದಾರೆ ಎಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲ ತದನಂತರದಲ್ಲಿ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಮೃತರ ಕುಟುಂಬಕ್ಕೆ ಹಾಗೂ ಗಾಯಾಳುಗಳಿಗೆ ಸಹಾಯ ಮಾಡಲು ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ

(ಸಾ.ಓ.ಹೇ.ಕೇ.ಸ.ಇ.ಎ.ಒ)